ನೋಟಿಸ್.

ತಾರೀಖು 17ನೇ ಡಿಶಂಬರ್ ಸ್ನ 1889ನೇ ಇಸವಿ.

ಸ್ನ 1878ನೇ ಇಸವಿ ಜ್ಯೂ. 8ನೇ ಮರ್ತುಮಿನ ಫಾರೆಸ್ಟ್ ರೂಲ್ಸ್ 13ನೇ ನಿಬಂಧನೆಗಳನ್ನನುಸರಿಸಿ ಇದರಿಂದ ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ; ಇದರಡಿ ನಮೂದಾದ ಪಂಕ್ತಿಯಿಂದ ಕಾಪಾಡಲ್ಪಟ್ಟ ತುಮಕೂರು ಡಿಸ್ಟ್ರಿಕ್ಟ್ ಸರ್ಕಾರಿ ಜಂಗಲಿಗಳನ್ನು ಮತ್ತು ಪ್ಲಾಂಟೇರ್ಷಗಳನ್ನು ಷಿಕಾರಿಗಳಿಗೂ ಆಂಬುಗಾರರು ಯಾ ಬ್ಯಾಟೆಗಾರ್ರಿಗೂ ಬಂದ ಮಾಡಲ್ಪಟ್ಟಿರುತ್ತೆ. ಯಾವ ವನುಷ್ಯ ಅಥವಾ ಮನುಷ್ಯರುಗಳಾಗಲಿ ಇನ್‌ಫಾರ್ಜ್ ಫಾರೆಸ್ಟ್ ಆಫಿಸರವರ ಲಿಖಿತ ಮೂಲಕ ಅಪ್ಪಣೆ ತಿವಾಯಿ ಆ್ವರ್ಜೆ ಜಂಗ್ಲಿಗಳಲ್ಲೂ ಮತ್ತು ಪ್ಲಾಂಟೇರ್ಷಗಳಲ್ಲೂ ಮೇಲ್ಕಂಡ ಬ್ಯಾಟೆ ವಗೈರೆ ಬಗ್ಯೆ ಪ್ರವೇಶ ಮಾಡಕೂಡದು.

	ಫಾರೆಸ್ಟ್ ವ ಪ್ಲಾಂಟೇರ್ಷ.		ತಾಲ್ಲೂಕು.
1.	ದೇವರಾಯದುರ್ಗ ಸ್ಪೇಷಲ್ ಫಾರೆಸ್ಟ್	..	ತುಮಕೂರು ತಾಲ್ಲೂಕು.
2.	ಮದ್ದಗಿರಿ ಡಿಟೋ	..	ಮದ್ದಗಿರಿ ತಾಲ್ಲೂಕು.
3.	ಹುಲಿಯೂರದುರ್ಗ ಡಿಟೋ	..	ಕುಣಿಗಲ್ ತಾಲ್ಲೂಕು.
4.	ಬುಕ್ಕಾಪಟ್ಟಣ ಡಿಟೋ	..	ಕೆಡಾ, ಗುಬ್ಬಿ, ಮತ್ತು ಹಿರಿಯೂರು ತಾ॥
5.	ಗೊಲ್ಲಹಳ್ಳಿ, ಮಲ್ಲಸಂದ್ರ ಪ್ಲಾಂಟೇರ್ಷ	..	ತುಮಕೂರು ತಾಲ್ಲೂಕು.
6.	ಬಳ್ಳಾಪುರ ಡಿಟೋ	..	ಡಿಟೋ
7.	ದಾಸರಹಳ್ಳಿ ಡಿಟೋ	..	ಡಿಟೋ
8.	ಲಿಂಗೇನಹಳ್ಳಿ ಡಿಟೋ	..	ಡಿಟೋ
9.	ಗಂಟಿಗೇನಹಳ್ಳಿಸಂದಲ್ ಡಿಟೋ	..	ಕೊರಟಿಗೆರೆ ಸಬ್ ತಾಲ್ಲೂಕು.
10.	ಹಾಲಕೆರೆ ಡಿಟೋ	..	ಕುಣಿಗಲ್ ತಾಲ್ಲೂಕು.

ಪ್ರತಿ ವರುಷ ಬಿಸಲುಕಾಲ ಅಂದರೆ ಫಿಬ್ರವರಿ ಗುರ್ರೆ ಲಾಗಾಯತು ಮೇ 31ರ ವರಿಗೆ ಮೇಲ್ಕಂಡ ಅಪ್ಪಣೆ ಕೊಡಲ್ಪಡುವದಿಲ್ಲವು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿವಿಜ್.

ಪ್ರಸಿದ್ಧ ಪತ್ರಿಕೆ.

ತಾರೀಖು 5ನೇ ಡಿಸಂಬರ್ 1889.

ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ತಿಳಿಯಪಡಿಸುವದೇನಂದರೆ,—ಬೆಂಗಳೂರಲ್ಲಿ ಹೊಸದಾಗಿ ತಯಾರಾಗತಕ್ಕ ರವಿನ್ಯೂ ಸರ್ವೆ ಆಫಿಸ್ ಕಾವಗಾರಿ ಕಂಟ್ರಾಕ್ಟಿಗಾಗಿ ಮೊಹರಾಗಿ ಬರುವ ದರಖಾಸ್ತುಗಳನ್ನು ಬೆಂಗಳೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಬರುವ ಜನವರಿ 6ನೇ ತಾರೀಖು ಪರಿಯಂತರ ಹಿಡಿಯಲ್ಪಡುವದು.

ಸುಮಾರು ಅಂದಾಜು ಪರಿಮಾಣವನ್ನು ಈ ಕೆಳಗೆ ನಮೂದಿಸಿ ಯಿದೆ, ಈ ಪರಿಮಾಣವು ಗೊತ್ತಾದ್ದಲ್ಲಾ, ಕಾವಗಾರಿಯು 1891ನೇ ಇಸವಿ ಜ್ಯೂ ಆಖೈರಿಗೆ ಪೂರೈಸತಕ್ಕದ್ದು.

2. ಸ್ಯಾಂಕ್ಷನ್ ಅಂದಾಜು ಮತ್ತು ಷರತ್ತು ಇತರ ನಂಗತಿಗಳನ್ನು ಸಹ ದಿವಿ 11 ಘೆಂಟೆ ಲಾಗಾಯತು ಸಾಯಂಕಾಲ 5 ಘೆಂಟೆ ವರಿಗೆ ಬೆಂಗಳೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರ ಆಫಿಸಿನಲ್ಲಿ ನೋಡಬಹುದು.

3. ದರಖಾಸ್ತುಗಳು ಅಚ್ಚಿನ ನಮೂನೆಯಲ್ಲಿ ಯಿರಬೇಕು. ಈ ನಮೂನೆಯನ್ನು ಎಗ್ಜಿಕ್ಯೂಟಿವ್ ಇಂಜನಿಯರವರ ಆಫಿಸಿನಲ್ಲಿ ಪಡೆಯಬಹುದು. ಬಾಬುವಾರ್ ಕೆಲಸವನ್ನು ಯಾವ ಯಾವ ದರದಲ್ಲಿ ನಡಿಸಲ್ಪಡುವದೋ ಅದನ್ನು ತೋರಿಸಿ ಕೆಳಗೆ ಕೊಟ್ಟು ಯಿರುವ ಫಾರಮಿನಂತೆ ಒಂದು ಪಟ್ಟಿ ತಯಾರಿಯಿಂದ ದರಖಾಸ್ತಿನೊಡನೆ ಕಳುಹಿಸಿಕೊಡಬೇಕು.

4. ಪ್ರತಿ ದರಖಾಸ್ತುಗಳು ಪ್ರೊನೋಟ್ ಮೂಲಕವಾಗಲಿ ನಗದಾಗಲಿ 100 ರೂಪಾಯಿ ಡಿಪಾಜಿಟ್ಟನ್ನ ವಡಗೂಡಿ ಯಿರಬೇಕು. ಮತ್ತು ಬೆಂಗಳೂರಲ್ಲಿ ಹೊಸದಾಗಿ ತಯಾರಾಗುವ ರವಿನ್ಯೂ ಸರ್ವೆ ಆಫಿಸ್ ಕಾವಗಾರಿ ದರಖಾಸ್ತುಯೆಂತ ಲಿಫಾಫೇ ಮೇಲೆ ಬರಮಯಿರಬೇಕು. ಹೀಗೆ ಯಿಲ್ಲದೆ ಬರುವ ದರಖಾಸ್ತುಗಳನ್ನ ತಿರಸ್ಕರಿಸಲ್ಪಡುವದು.

5. ದರಖಾಸ್ತುಗಳನ್ನ ಅಂಗೀಕರಿಸತಕ್ಕದ್ದು ಚೀಫ್ ಇಂಜನಿಯರ್ ಸಾಹೆಬರವರದಾಗಿ ಯಿದೆ. ಅವರು ಕಮ್ಮಿ ದರ ವ ಇತರ ದರಖಾಸ್ತನ್ನು ಮಂಜೂರ್ಮಾಡುವನಕ್ಕೆ ವ ದರಖಾಸ್ತನ್ನು ಅನಂಗೀಕರಿಸುವದಕ್ಕೆ ಕಾರಣವನ್ನ ಹೇಳುವದಕ್ಕೆ ಬದ್ಧರಾಗಿ ಯಿರುವದಿಲ್ಲ.

6. ದರಖಾಸ್ತು ಮಂಜೂರ್ಮಾಡಿದ 8 ರೋಜುಗಳ ವಳಗಾಗಿ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಕಂಟ್ರಾಕ್ಟು ಬಾಂಡನ್ನ ಬರದುಕೊಡತಕ್ಕದ್ದು ಆವಶ್ಯವಾಗಿ ಯಿದೆ. ಹೀಗೆ ಮಾಡದಿರುವ ನಂದರ್ಭದಲ್ಲಿ ದರಖಾಸ್ತು ರದ್ದು ಆದಹಾಗೆ ಭಾವಿಸಲ್ಪಡುವದಲ್ಲದೆ ದರಖಾಸ್ತುದಾರನು ತನ್ನ ಡಿಪಾಜಿಟ್ ಮೊಬಲಗನ್ನ ಹೋಗಲಾಡಿಸಿ ಕೊಳ್ಳುವನು.